ಅ. ಬೆಂಗಳೂರು ನಗರದಲ್ಲಿರುವ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು;

ಆ. ಬೆಂಗಳೂರಿನ ಶಿವಾಜಿನಗರ ವಿಧಾನ ಸಭಾ ಕ್ಷೇತ್ರದಲ್ಲಿನ ಸಂಪಂಗಿರಾಮನಗರದಲ್ಲಿರತಕ್ಕ ಗುಡಿ ಕೈಗಾರಿಕೆಗಳೆಷ್ಟು;

ಇ. ಸಂಪಂಗಿರಾಮನಗರವನ್ನು ಗುಡಿ ಕೈಗಾರಿಕಾ ಪ್ರದೇಶವೆಂದು ಘೋಷಿಸುವುದಾಗಿ ಸರ್ಕಾರದ ಆಶ್ವಾಸನೆ ನೀಡಿದ್ದು ನಿಜವೇ;

ಈ. ಮೇಲ್ಕಂಡ ಪ್ರದೇಶವನ್ನು ಗುಡಿ ಕೈಗಾರಿಕಾ ಪ್ರದೇಶವೆಂದು ಸರ್ಕಾರ ಘೋಷಿಸುತ್ತದೆಯೇ?

ಶ್ರೀ ಆರ್ ರೋಷನ್‌ಬೇಗ್ (ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು)

ಅ. ದಿನಾಂಕ: 30.11.2002ರಲ್ಲಿದ್ದಂತೆ 53,228

ಆ. 1997

ಇ. ಇಲ್ಲ.

ಈ. ಸಧ್ಯಕ್ಕೆ ಪ್ರಸ್ತಾಪವಿರುವುದಿಲ್ಲ. ಶಿವಾಜಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸಂಪಂಗಿರಾಮನಗರದಲ್ಲಿ ಕೈಮಗ್ಗಗಳು ಮತ್ತು ವಿದ್ಯುತ್ ಮಗ್ಗಗಳ ನೇಕಾರರು ಹೆಚ್ಚಿನ ಸಂಖ್ಯೆಯಲ್ಲಿದ್ದು, ಈ ಪ್ರದೇಶವನ್ನು ಗುಡಿ ಕೈಗಾರಿಕಾ ಪ್ರದೇಶವೆಂದು ಘೋಷಿಸುವ ಮುನ್ನ ಸದರಿ ಪ್ರದೇಶವನ್ನು ನಗರ ಯೋಜನಾ ಪ್ರಾಧಿಕಾರದ ಜ್ಞೋನಲ್ ರೆಸ್ಯುಲ್ಯೂಶನ್ ಅನ್ವಯ ಲಘು ಕೈಗಾರಿಕಾ ಪ್ರದೇಶವೆಂದು ಘೋಷಿಸುವ ಅಗತ್ಯವಿದೆ. ಆದ್ದರಿಂದ ಈ ಬಗ್ಗೆ ನಗರಾಭಿವೃದ್ಧಿ ಇಲಾಖೆಯು ಅಗತ್ಯ ಕ್ರಮ ಕೈಗೊಳ್ಳಬೇಕಾಗಿದೆ.

ಕೊಳ್ಳೇಗಾಲ ತಾಲ್ಲೂಕಿನ ಕುಂತೂರು ಮಹದೇಶ್ವರ ಸಕ್ಕರೆ ಕಾರ್ಖಾನೆ ಕುರಿತು

267(2132): ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮರಳ್ಳಿ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಕುಂತೂರು ಮಹದೇಶ್ವರ ಸಕ್ಕರೆ ಕಾರ್ಖಾನೆಯಿಂದ ಕಬ್ಬು ಬೆಳೆಗಾರರಿಗೆ ಬಾಕಿ ಎಲ್ಲಾವನ್ನೂ ನೀಡಲಾಗಿದೆಯೇ? ಇಲ್ಲದಿದ್ದಲ್ಲಿ, ಉಳಿಕೆ ಮೊಬಲಗು ಎಷ್ಟು? ಈ ಮೊಬಲಗನ್ನು ಯಾವಾಗ ನೀಡಲಾಗುವುದು.

ಆ. ಕುಂತೂರು ಸಕ್ಕರೆ ಕಾರ್ಖಾನೆಯ ಸಿಬ್ಬಂದಿ ಹಾಗೂ ಕಾರ್ಮಿಕರುಗಳಿಗೆ ಪೂರ್ಣವೇತನವನ್ನು ನೀಡಲಾಗಿದೆಯೆ ಇಲ್ಲದಿದ್ದಲ್ಲಿ ಯಾವಾಗಿನಿಂದ ಎಷ್ಟು ವೇತನ ಬಾಕಿ ಇದೆ? ಈ ಬಾಕಿ ವೇತನವನ್ನು ಯಾವಾಗ ನೀಡಲಾಗುವುದು ಈವರೆಗೂ ನೀಡದೇ ಇರಲು ಕಾರಣವೇನು?

ಶ್ರೀ ಎಂ. ಮಹದೇವ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ. ಕುಂತೂರು ಶ್ರೀ ಮಹದೇಶ್ವರ ಸಕ್ಕರೆ ಕಾರ್ಖಾನೆಯಿಂದ 3021 ಮಂದಿ ಕಬ್ಬು ಬೆಳೆಗಾರರಿಗೆ ಬಾಕಿ ಇದ್ದ ರೂ. 12,18,05,546.00 ಪೈಕಿ 3017 ಮಂದಿ ಕಬ್ಬು ಬೆಳೆಗಾರರಿಗೆ ಈವರೆಗೆ ರೂ. 12,17,78,510.00 ಪಾವತಿಸಿದೆ. ಆದರೆ 4 ಮಂದಿ ಕಬ್ಬುಬೆಳೆಗಾರರಿಗೆ ಪಾವತಿಸಲು ಕೇವಲ ರೂ. 27036.00 ಬಾಕಿ ಇರುತ್ತದೆ. ಈ 4 ಮಂದಿ ಕಬ್ಬು ಬೆಳೆಗಾರರು ತಮ್ಮ ಬ್ಯಾಂಕ್ ಖಾತೆ ವಿವರಗಳನ್ನು ನೀಡಿಲ್ಲದಿರುವುದರಿಂದ ಸದರಿ ಮೊಬಲಗನ್ನು ಪಾವತಿಸಲು ಅನುಕೂಲವಾಗುವಂತೆ ಬ್ಯಾಂಕ್ ಖಾತೆಯ ವಿವರಗಳನ್ನು ನೀಡಲು ಜಿಲ್ಲಾಧಿಕಾರಿಗಳು ರೈತರನ್ನು ಕೇಳಿರುತ್ತಾರೆ.

ಆ. ಇಲ್ಲ.

ಜಿಲ್ಲಾಧಿಕಾರಿ ಚಾಮರಾಜನಗರ ಜಿಲ್ಲೆ, ಇವರು ತಿಳಿಸಿರುವಂತೆ ನವೆಂಬರ್ 2001ರಿಂದ ಜೂನ್ 2002ರ ವರೆಗೆ ರೂ. 1,75,72,162.00 ಕಾರ್ಮಿಕರ ವೇತನ ಬಾಕಿ ಇರುತ್ತದೆ. ಈ ಮೊತ್ತವನ್ನು ಕಾರ್ಖಾನೆಯಿಂದ ಕೈಗಾರಿಕಾ ವಿವಾದಗಳ ಕಾಯ್ದೆ ಪ್ರಕಾರ ಭೂ ಕಂದಾಯ ಬಾಕಿ ಎಂದು ಪರಿಗಣಿಸಿ, ವಸೂಲಿ ಮಾಡಲು ಉಪ ಕಾರ್ಮಿಕ ಆಯುಕ್ತರು, ವಸೂಲಿ ಪ್ರಮಾಣ ಪತ್ರ ನೀಡಿರುವುದಾಗಿ ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಇವರು ತಿಳಿಸಿರುತ್ತಾರೆ.

ಈ ಮಧ್ಯೆ ರೋಬೋ ಬ್ಯಾಂಕ್ ಪ್ರಕರಣಗಳಲ್ಲಿ ಮಾನ್ಯ ಮುಂಬೈ ಉಚ್ಚ ನ್ಯಾಯಾಲಯವು ನೀಡಿರುವ ತೀರ್ಪುಗಳ ಪ್ರಕಾರ, ಕಾರ್ಖಾನೆಯ ಸಕ್ಕರೆ ದಾಸ್ತಾನು ಮಾರಾಟ ಮಾಡಿ, ಬಂದ ಮೊತ್ತದಿಂದ ರೈತರ ಬಿಲ್ ಬಾಕಿಯನ್ನು ಪಾವತಿಸಿದ ನಂತರ, ಅದನ್ನು ಮುಂಬೈ ಉಚ್ಚ ನ್ಯಾಯಾಲಯದ ಗಮನಕ್ಕೆ ತಂದು ಕಾರ್ಮಿಕರ ಬಾಕಿಯನ್ನು ಪಾವತಿಸಲು ಮುಂಬೈ ಉಚ್ಚ ನ್ಯಾಯಾಲಯದಿಂದ ಆದೇಶ ಪಡೆಯಬೇಕಾಗಿರುತ್ತದೆ. ಈ ಬಗ್ಗೆ ಈಗಾಗಲೇ ಅಗತ್ಯ ಅರ್ಜಿಯನ್ನು ನ್ಯಾಯಾಲಯದಲ್ಲಿ ಸಲ್ಲಿಸಲಾಗಿದ್ದು, ದಿನಾಂಕ: 19.12.2002ರಂದು ಇದ್ದ ಪ್ರಕರಣವು 4 ವಾರಗಳಷ್ಟು ಕಾಲ ಮುಂದೂಡಲ್ಪಟ್ಟಿರುತ್ತದೆ.

ಆದ್ದರಿಂದ ಈ ಬಗ್ಗೆ ಮಾನ್ಯ ಮುಂಬೈ ಉಚ್ಚ ನ್ಯಾಯಾಲಯದ ಆದೇಶ ಪಡೆದ ನಂತರ, ಕಾರ್ಮಿಕರ ಬಾಕಿ ವೇತನ ಕಾರ್ಮಿಕರಿಗೆ ಪಾವತಿಸಲು ಜಿಲ್ಲಾಧಿಕಾರಿಗಳು ಕ್ರಮ ತೆಗೆದುಕೊಳ್ಳಬೇಕಾಗಿರುತ್ತದೆ.

ದಿನಾಂಕ 26.12.2002ರ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು

ಪುತ್ತೂರು ತಾಲ್ಲೂಕು ಕೊಯಿಲಾ ಕೆ.ಸಿ. ಫಾರ್ಮ ಒತ್ತುವರಿ

1780(2244): ಶ್ರೀ ಅಂಗಾರ ಎನ್. (ಸೂಳ್ಯ) : ಮಾನ್ಯ ರೇಷ್ಮೆ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಸೂಳ್ಯ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಒಳಪಟ್ಟು ಪುತ್ತೂರು ತಾಲ್ಲೂಕು ಕೊಯಿಲಾ ಕೆ.ಸಿ. ಫಾರ್ಮ್ ಹಾಗೂ ರೇಷ್ಮೆ ಕೃಷಿಗಾಗಿ ಕಾದಿರಿಸಲಾದ ಸ್ಥಳ ಎಷ್ಟು?

ಆ. ಯಾವ ಯಾವ ಸರ್ವೆ ನಂಬರ್‌ಗಳಲ್ಲಿ ಎಷ್ಟೆಷ್ಟು ಸ್ಥಳವಿದೆ. ಇದರಲ್ಲಿ ಎಷ್ಟು ಕುಟುಂಬಗಳು ಅನಧಿಕೃತವಾಗಿ ಒತ್ತುವರಿಯನ್ನು ಮಾಡಿಕೊಂಡಿರುವ ಕುಟುಂಬಗಳವಾರು ವಿಸ್ತೀರ್ಣವಾರು ವಿವರ ಒದಗಿಸುವುದು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಹಾಗೂ ಜವಳಿ ಸಚಿವರು)

ಅ. ರೇಷ್ಮೆ ಕೃಷಿ ಕ್ಷೇತ್ರಕ್ಕೆ ಒಟ್ಟು 50.00 ಎಕರೆ ಜಮೀನನ್ನು ನೀಡಲಾಗಿದ್ದು. ಇದರಲ್ಲಿ 20.00 ಎಕರೆ ಜಮೀನನ್ನು ಇಲಾಖೆಯು ಉಪಯೋಗಿಸುತ್ತಿದ್ದು, ಇದರಲ್ಲಿ ಹಿಪ್ಪನೇರಳೆ ವಿಸ್ತೀರ್ಣ 3.00 ಎಕರೆಗಳು.

ಆ. ಒಟ್ಟು 20 ಎಕರೆ ಜಮೀನಿನ ಸರ್ವೆ ನಂಬರುಗಳು

299:1

299:2

299:3 ಮತ್ತು 293